# NERL
National E-Repository Limited

ಇಎನ್‌ಡಬ್ಲ್ಯುಆರ್ಗಳಲ್ಲಿ ವ್ಯವಹರಿಸಲು ಇಚ್ಛಿಸುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ, ರಿಪಾಸಿಟರಿ ಪಾರ್ಟಿಸಿಪೆಂಟ್ಸ್ ನಿಗದಿಪಡಿಸಿರುವ ಎಲ್ಲಾ ಔಪಚಾರಿಕತೆಗಳನ್ನೂ ಪೂರೈಸಿ ನಿಗದಿಪಡಿಸಲಾಗಿರುವ ನಮೂನೆಯಲ್ಲಿ ಕೋರಿಕೆ ಸಲ್ಲಿಸುವ ಮೂಲಕ ಎನ್‌ಇಆರ್‌ಎಲ್‌ನ ಪಟ್ಟಿಯಲ್ಲಿಮ್ ಸೇರಿಸಲಾದ ರಿಪಾಸಿಟರಿ ಪಾರ್ಟಿಸಿಪೆಂಟ್ ಬಳಿ ಅಕೌಂಟ್ ತೆರೆಯಬಹುದು



## ಡೆಪಾಸಿಟರ್ಗಳಿಗೆ ಆಗುವ ಪ್ರಯೋಜನಗಳು

ಇಎನ್‌ಡಬ್ಲ್ಯುಆರ್ ಸಿಸ್ಟಮ್, ಎಲ್ಲಾ ಡೆಪಾಸಿಟರ್ಗಳಿಗೂ ಕೆಳಕಂಡ ಪ್ರಯೋಜನಗಳನ್ನು ಉಂಟು ಮಾಡುತ್ತದೆ:

- ವೇರ್‌ಹೌಸ್‌ನಲ್ಲಿ ಶೇಖರಿಸಲಾಗಿರುವ ಕಮಾಡಿಟಿಯ ಮೇಲೆ ಸುಲಭವಾಗಿ ಫೈನಾನ್ಸ್ ಪಡೆದುಕೊಳ್ಳಬಹುದು
- ಟ್ರಾನ್ಸ್‌ಫರ್ಸ್ ಮತ್ತು ಪ್ಲೆಡ್ಜಿಂಗ್‌ಗಳನ್ನು ಸಮರ್ಥವಾಗಿ ನಿರ್ವಹಿಸಲು ನೆರವಾಗುವುದಕ್ಕೆ ವೇರ್‌ಹೌಸ್ ರಿಸೀಟ್‌ಸ್‌ನ ಎಲೆಕ್ಟ್ರಾನಿಕ್ ಲೆಕ್ಕದಾಖಲೆ ಹಿಡುವಳಿ
- ಎಲೆಕ್ಟ್ರಾನಿಕ್ ನೆಗೋಶಿಯೆಬಲ್ ವೇರ್‌ಹೌಸ್ ರಿಸೀಟ್ (ಇಎನ್‌ಡಬ್ಲ್ಯುಆರ್)ನ ಬಹು ಟ್ರಾನ್ಸ್‌ಫರ್ಸ್
- ಕೃಷಿ ಉತ್ಪನ್ನ, ಗ್ರೇಡಿಂಗ್, ಸೈಂಟಿಫಿಕ್ ವೇರ್‌ಹೌಸಿಂಗ್, ಪ್ಯಾಕೇಜಿಂಗ್, ಮತ್ತು ಸಮರ್ಥ ತಂತ್ರಗಳ ನಿರ್ವಹಣೆಯ ಪ್ರಮಾಣೀಕರಣ
- ಗ್ರಾಹಕರು(ಉದ್ಯಮಗಳು, ಪ್ರಕ್ರಿಯಾದಾರರು, ಸಗಟುವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು ಇತ್ಯಾದಿ) ಗ್ರೇಡ್ ಮಾಡಿದ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಪಡೆದುಕೊಳ್ಳಬಹುದು
- ಇಎನ್‌ಡಬ್ಲ್ಯುಆರ್ಗಳ ಸಮರ್ಥವಾದ ಕ್ಲಿಯರಿಂಗ್, ಸೆಟ್ಲ್‌ಮೆಂಟ್ ಮತ್ತು ಡೆಲಿವರಿ
- ಪಾರದರ್ಶಕತೆ ಮತ್ತು ಜಾಡುಹಿಡಿಯುವಿಕೆ: ಪ್ರಕ್ರಿಯೆಯ ಪ್ರತಿಯೊಂದು ಹೆಜ್ಜೆಯಲ್ಲೂ ಟ್ರಾನ್ಸಾಕ್ಷನ್‌ಗಳ ಸರಪಳಿಯ ನೋಟ
- ಇಎನ್‌ಡಬ್ಲ್ಯುಆರ್ಗಳ ಪ್ರತ್ಯೇಕತೆ (ಹಲವು ಹಣಕಾಸು ಸಂಸ್ಥೆಗಳಿಂದ ಫೈನಾನ್ಸ್ ಪಡೆದುಕೊಳ್ಳಲು ಮತ್ತು ಮಾಲೀಕತ್ವದ ಟ್ರಾನ್ಸ್‌ಫರ್ಗಳ ವಿಭಜನೆಗೆ ನೆರವಾಗುತ್ತದೆ)

# ಡೆಪಾಸಿಟ್ ಮತ್ತು ವಿತ್‌ಡ್ರಾಯಲ್ ಪ್ರಕ್ರಿಯೆ

## ಎನ್‌ಇಆರ್‌ಎಲ್‌ನಲ್ಲಿ ಡೆಪಾಸಿಟ್ ಪ್ರಕ್ರಿಯೆ

- ಕ್ಲೈಂಟ್, ರಿಪಾಸಿಟರಿಯಲ್ಲಿ ಪಟ್ಟಿಮಾಡಲಾದ ಆರ್‌ಪಿ/ ಆರ್‌ಪಿಗಳೊಂದಿಗೆ ಖಾತೆ ತೆರೆಯಬಹುದು
- ಮೇಲೆ ತಿಳಿಸಿದ ವೇರ್‌ಹೌಸ್‌ನಲ್ಲಿ ಡಬ್ಲ್ಯುಆರ್‌ಡಿಎ ಅನುಮೋದನೆ ಮಾಡಿದ ಕಮಾಡಿಟಿಯನ್ನು ಡೆಪಾಸಿಟ್ ಮಾಡುವ ಸಲುವಾಗಿ ಕ್ಲೈಂಟ್, ಡಬ್ಲ್ಯುಆರ್‌ಡಿಎದೊಂದಿಗೆ ನೋಂದಣಿ ಮಾಡಿಕೊಂಡ ವೇರ್‌ಹೌಸ್‌ಅನ್ನು ಸಂಪರ್ಕಿಸಬಹುದು
- ಕ್ಲೈಂಟ್, ವೇರ್‌ಹೌಸ್‌ಮನ್ (ಡಬ್ಲ್ಯುಎಸ್‌ಪಿ) ನಿಗದಿಪಡಿಸಿರುವ ಎಲ್ಲಾ ಔಪಚಾರಿಕತೆಗಳನ್ನೂ ಪೂರ್ಣಗೊಳಿಸಿ, ಡಬ್ಲ್ಯುಎಸ್‌ಪಿಗೆ ಸ್ಟೋರೇಜ್, ಲೋಡಿಂಗ್ /ಅನ್‌ಲೋಡಿಂಗ್, ಸ್ಯಾಂಪ್ಲಿಂಗ್, ಅಸ್ಸೇಯರ್ ಮತ್ತು ವೇರ್‌ಹೌಸ್‌ಗೆ ಏರ್ಪಡಬಹುದಾದ ಯಾವುದೇ ಸಾಂದರ್ಭಿಕ ವೆಚ್ಚಗಳನ್ನು ಪಾವತಿಸಬೇಕು
- ಇಡಬ್ಲ್ಯುಆರ್/ಇಎನ್‌ಡಬ್ಲ್ಯುಆರ್ ತೆರಯಲು, ವೇರ್‌ಹೌಸ್, ಎನ್‌ಇಆರ್‌ಎಲ್ ಸಿಸ್ಟಮ್‌ನಲ್ಲಿ ಡೆಪಾಸಿಟ್ ವಿವರಗಳನ್ನು ನಮೂದಿಸುತ್ತದೆ
- ನಂತರ, ಡಬ್ಲ್ಯುಆರ್‌ಡಿಎ ನಿಗದಿಪಡಿಸಿರುವ ಕಾರ್ಯವಿಧಾನದ ಪ್ರಕಾರ ಅಸ್ಸೇಯರ್ ಸಾಮಗ್ರಿಗಳನ್ನು ಟೆಸ್ಟ್ ಮಾಡಿ, ಠೇವಣಿಯಿರಿಸಲಾದ ಸಾಮಗ್ರಿಗಳಿಗೆ ಒಂದು ಗ್ರೇಡ್ ನೀಡುತ್ತದೆ
- ಸಾಮಗ್ರಿಗಳು, ಡಬ್ಲ್ಯುಆರ್‌ಡಿಎ ನಿಗದಿಪಡಿಸಿರುವ ಸ್ಟ್ಯಾಂಡರ್ಡ್‌ಗಳಿಗೆ ತಕ್ಕಂತೆ ಇಲ್ಲದಿದ್ದಲ್ಲಿ, ಡಬ್ಲ್ಯುಎಸ್‌ಪಿ ಅದನ್ನು ತಿರಸ್ಕರಿಸುತ್ತದೆ ಮತ್ತು ಕ್ಲೈಂಟ್ ಸಾಮಗ್ರಿಗಳನ್ನು ವೇರ್‌ಹೌಸ್‌ನಿಂದ ಹಿಂದೆಗೆದುಕೊಳ್ಳಬೇಕಾಗುತ್ತದೆ
- ಡಬ್ಲ್ಯುಆರ್‌ಡಿಎ ನಿಗದಿಪಡಿಸಿರುವ ಗ್ರೇಡಿಂಗ್ ಸ್ಟ್ಯಾಂಡರ್ಡ್‌ಗಳಿಗೆ ತಕ್ಕಂತೆ ಅಸ್ಸೇಯರ್ ಗ್ರೇಡ್ ಮಾಡಿರುವಂತೆ, ಕ್ಲೈಂಟ್‌ನ ಆಯ್ಕೆಯ ಮೇರೆಗೆ ಸಾಮಗ್ರಿಗಳಿಗಾಗಿ ಇಡಬ್ಲ್ಯುಆರ್/ ಇಎನ್‌ಡಬ್ಲ್ಯುಆರ್‌ಗಳನ್ನು ಕ್ಲೈಂಟ್‌ಗೆ ನೀಡಲಾಗುತ್ತದೆ
- ಆರ್‌ಪಿ ನೀಡಿರುವ ಹೋಲ್ಡಿಂಗ್/ಟ್ರಾನ್ಸಾಕ್ಷನ್ ಸ್ಟೇಟ್‌ಮೆಂಟ್‌ನಿಂದ ಕ್ಲೈಂಟ್ ಜಮೆಯನ್ನು ಪರಿಶೀಲಿಸಬೇಕಾಗುತ್ತದೆ

## ಎನ್‌ಇಆರ್‌ಎಲ್‌ನಲ್ಲಿ ವಿತ್‌ಡ್ರಾಯಲ್ ಪ್ರಕ್ರಿಯೆ

- ಕ್ಲೈಂಟ್, ಆರ್‌ಪಿಯನ್ನು ಸಂಪರ್ಕಿಸಿ, ತತ್ಸಂಬಂಧಿತ ಫಾರ್ಮ್ ಭರ್ತಿ ಮಾಡುವ ಮೂಲಕ ಇಚ್ಛಾನುಸಾರ ವಿತ್‌ಡ್ರಾಯಲ್ ಟ್ರಾನ್ಸಾಕ್ಷನ್ ಆರಂಭಿಸಬೇಕಾಗುತ್ತದೆ
- ಆರ್‌ಪಿ ಕೋರಿಕೆಯನ್ನು ಎನ್‌ಇಆರ್‌ಎಲ್ ಸಿಸ್ಟಮ್‌ನಲ್ಲಿ ನಮೂದಿಸಿ, ವಿತ್‌ಡ್ರಾಯಲ್ ಇನಿಶಿಯೇಶನ್ ಫಾರ್ಮ್‌ನ ಅಕ್ನಾಲೆಡ್ಜ್‌ಮೆಂಟ್ ನೀಡುವರು
- ಕ್ಲೈಂಟ್, ಅಕ್ನಾಲೆಡ್ಜ್‌ಮೆಂಟ್ ಕಾಪಿ, ಐಡೆಂಟಿಟಿ ಪ್ರೂಫ್, ಮತ್ತು ಲೆಟರ್ ಆಫ್ ಅಥಾರಿಟಿಯೊಂದಿಗೆ (ಬೆನಿಫಿಶಿಯರಿ ಹೋಲ್ಡರ್ ಸಾಮಗ್ರಿಗಳನ್ನು ಹಿಂಪಡೆದುಕೊಳ್ಳದ ಸಂದರ್ಭದಲ್ಲಿ) ವೇರ್‌ಹೌಸ್‌ಅನ್ನು ಸಂಪರ್ಕಿಸಬೇಕು
- ವೇರ್‌ಹೌಸ್‌ನಿಂದ ಸಾಮಗ್ರಿಗಳನ್ನು ಹಿಂದಕ್ಕೆ ಪಡೆದುಕೊಳ್ಳುವ ಸಮಯದಲ್ಲಿ, ಕ್ಲೈಂಟ್ ಡಬ್ಲ್ಯುಎಸ್‌ಪಿಗೆ ಸ್ಟೋರೇಜ್ ಚಾರ್ಜಸ್ ಮತ್ತು ಯಾವುದೇ ಇತರ ಸಾಂದರ್ಭಿಕ ಶುಲ್ಕಗಳನ್ನು ಪಾವತಿಸಬೇಕು
- ಡಬ್ಲ್ಯುಎಸ್‌ಪಿ, ಎನ್‌ಇಆರ್‌ಎಲ್ ಸಿಸ್ಟಮ್‌ನಲ್ಲಿ ಹಿಂಪಡೆದುಕೊಂಡ ಪ್ರಮಾಣವನ್ನು ಖಾತರಿಪಡಿಸಬೇಕು
- ಕ್ಲೈಂಟ್, ಆರ್‌ಪಿ ನೀಡಿರುವ ಹೋಲ್ಡಿಂಗ್/ ಟ್ರಾನ್ಸಾಕ್ಷನ್ ಸ್ಟೇಟ್‌ಮೆಂಟ್‌ನಲ್ಲಿ ಅದನ್ನು ಪರಿಶೀಲಿಸಬೇಕು

## ನಮ್ಮನ್ನು ಸಂಪರ್ಕಿಸಿ

ಪಟ್ಟಿಮಾಡಲಾದ ಆರ್‌ಪಿಗಳು, ಅಕೌಂಟ್ ಓಪನಿಂಗ್ ಪ್ರಕ್ರಿಯೆ, ಡಾಕ್ಯುಮೆಂಟೇಶನ್ ಅಗತ್ಯಗಳು, ಫೀಸ್, ಇತ್ಯಾದಿಗಳ ಕುರಿತಾದ ಯಾವುದೇ ಪ್ರಶ್ನೆಗಳಿಗೆ ದಯವಿಟ್ಟು ನಮ್ಮನ್ನು ಇಲ್ಲಿ ಸಂಪರ್ಕಿಸಿ:

**ಶ್ಯಾಮ್ ರಸ್ತೋಗಿ:** 91-99364 88811
**ವಿನೀತ್ ಗುಪ್ತ:** 91-98181 46885
**ಟೋಲ್‌ಫ್ರೀ ಹೆಲ್ಪ್‌ಲೈನ್:** 1800 209 6007
**ಬೋರ್ಡ್ ಲೈನ್:** (022) 6244 1500
**ವೆಬ್‌ಸೈಟ್:** www.nerlindia.com

## ಎನ್‌ಇಆರ್‌ಎಲ್ ಕುರಿತು

ಅತಿದೊಡ್ಡ ಅಗ್ರಿ ಕಮಾಡಿಟಿ ಡಿರೈವೇಟಿವ್ಸ್ ಎಕ್ಸ್‌ಚೇಂಜ್ ಆಗಿರುವ ನ್ಯಾಶನಲ್ ಕಮಾಡಿಟಿ & ಡಿರೈವೇಟಿವ್ಸ್ ಎಕ್ಸ್‌ಚೇಂಜ್ ಲಿಮಿಟೆಡ್(ಎನ್‌ಸಿಡಿಇಎಕ್ಸ್), ಎಲೆಕ್ಟ್ರಾನಿಕ್ ರೂಪದಲ್ಲಿ ಕಮಾಡಿಟಿಗಳಿಗಾಗಿ ನೆಗೋಶಿಯೆಬಲ್ ವೇರ್‌ಹೌಸ್ ರಿಸೀಟ್ಸ್ ನೀಡುವುದಕ್ಕಾಗಿ ಒಂದು ವೇದಿಕೆ ಒದಗಿಸುವ ನ್ಯಾಶನಲ್ ಇ-ರೆಪಾಸಿಟರಿ ಲಿಮಿಟೆಡ್(ಎನ್‌ಇಆರ್‌ಎಲ್) ಎಂಬ ಒಂದು ಸಂಸ್ಥೆ ಮತ್ತು ಮಾರುಕಟ್ಟೆ ಮಧ್ಯಸ್ಥಿಕೆದಾರನನ್ನು ಸ್ಥಾಪಿಸಿದೆ

ಭಾರತದಲ್ಲಿ ಕಮಾಡಿಟಿ ರಿಪಾಸಿಟರಿ ಆಗಿರುವ ಎನ್‌ಇಆರ್‌ಎಲ್‌ಅನ್ನು ಫೆಬ್ರವರಿ 2017ರಲ್ಲಿ ಸ್ಥಾಪಿಸಲಾಗಿದ್ದು ಇದು ಡಬ್ಲ್ಯುಆರ್‌ಡಿಎದಿಂದ ಸೆಪ್ಟೆಂಬರ್ 26, 2017ರಂದು ಪರ್ಮನೆಂಟ್ ಸರ್ಟಿಫಿಕೇಟ್ ಆಫ್ ರೆಜಿಸ್ಟ್ರೇಶನ್ ಪಡೆದುಕೊಂಡಿದೆ.

ಎನ್‌ಸಿಡಿಇಎಕ್ಸ್ ಅಲ್ಲದೆ, ನ್ಯಾಶನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್ಮೆಂಟ್ (ನಬಾರ್ಡ್), ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ಹಾಗು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎನ್‌ಇಆರ್‌ಎಲ್‌ನ ಶೇರ್‌ಹೋಲ್ಡರ್ಸ್ ಆಗಿವೆ. ಇಂತಹ ವಿಶಿಷ್ಟ ಪ್ರೋತ್ಸಾಹಕತ್ವವು, ಭಾರತೀಯ ಕೃಷಿ ಮಾರುಕಟ್ಟೆಗೆ ಸೇವೆಗಳನ್ನು ಒದಗಿಸುವುದಕ್ಕಾಗಿ ರಿಪಾಸಿಟರಿಗೆ ಒಂದು ವಿಶಿಷ್ಟವಾದ ಉದ್ದೇಶ ಒದಗಿಸಿದೆ. ಸಾಮರ್ಥ್ಯವನ್ನು ಹೆಚ್ಚಿಸಿ, ಅಪಾಯಗಳನ್ನು ಕನಿಷ್ಟಗೊಳಿಸಿ, ಮತ್ತು ವೆಚ್ಚಗಳನ್ನು ಕಡಿಮೆ ಮಾಡುವಂತಹ ಪರಿಹಾರಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಎಲೆಕ್ಟ್ರಾನಿಕ್ ನಿಗೋಶಿಯೆಬಲ್ ವೇರ್‌ಹೌಸ್ ರಿಸೀಟ್‌ಸ್‌ಗಳ ಸುರಕ್ಷತೆ ಮತ್ತು ವಿಶ್ವಸನೀಯತೆಯನ್ನು ಖಾತರಿಪಡಿಸುವುದು ಇದರ ಗುರಿಯಾಗಿದೆ. ಭಾರತೀಯ ಕಮಾಡಿಟಿ ಮಾರ್ಕೆಟ್‌ಸ್‌ನ ಬೆಳೆಯುತ್ತಿರುವ ಅಗತ್ಯಗಳನ್ನು ಪೂರೈಸುವುದನ್ನು ಮುಂದುವರಿಸುವಂತಹ ಸೇವೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಎನ್‌ಇಆರ್‌ಎಲ್ ನಿಶ್ಚಲವಾದ ಆದರೆ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.